# ಅಂಗೈಯಲ್ಲಿ ಅರಮನೆ

## ಹಳೇಮನೆ

ಅಮ್ಮ ಹೊರಗಡೆ ಗೇಟಿನ ಹತ್ತಿರ ನಿಂತು ಯಾರ ಬಳಿಯೋ ಮಾತನಾಡುತ್ತಿದ್ದುದು ಕೇಳಿ, ನಾನೂ ಹೊರಗೆ ಬಂದೆ. ಅಮ್ಮನ ಹತ್ತಿರ ಏನೋ ಕೇಳಿ ಆ ದಂಪತಿ ಮುಂದೆ ಹೋಗುತ್ತಿದ್ದರು. 'ಏನಂತೆ?' ಎಂದು ಕೇಳಿದೆ. ಅದಕ್ಕೆ ಅಮ್ಮ, 'ಹಳೇಮನೆ ಬೇಕಾಗಿತ್ತಂತೆ ಅವರಿಗೆ. ಇಲ್ಲಿ ಎಲ್ಲೂ ಹಳೇಮನೆ ಸಿಗಲ್ಲ, ಹೀಗೇ ಮುಂದೆ ಅರ್ಧ ಮೈಲು ನಡೆದುಕೊಂಡೆ ಹೋಗಿ, ಅಲ್ಲಿ ಒಂದೆರಡು ಇವೆ ಅಂತ ಹೇಳಿದೆ' ಅಂದಳು. ಅಷ್ಟುಹೊತ್ತಿಗೆ ಆ ದಂಪತಿ ವಾಪಾಸ್ಸು ಬಂದರು. 'ಮೇಡಂ, ಹಳೇಮನೆಯವರು ಇಲ್ಲೇ ಎಲ್ಲೊ ಇದ್ದಾರೆ ಅಂತ ಹೇಳಿದರು ಆಕಡೆಯವರು. ಹೋದವಾರ ಬಾಡಿಗೆಗೆ ಬಂದಿದ್ದಾರೆ ನೋಡಿ. ಅವರ ಮನೆ ಕೇಳಿದ್ವಿ...' ಎಂದರು. ನಾನು ನಗುತ್ತಲೇ ನಮ್ಮ ಮನೆಯ ಎದುರು ಮನೆಯನ್ನು ತೋರಿಸಿದೆ.



**ಸು. ವಿಜಯಲಕ್ಷ್ಮಿ**

## ಬ್ಯಾಗಿನ ಫಜೀತಿ

ಬಹಳ ಹಿಂದಿನ ಘಟನೆ. ನಮ್ಮ ತಾಯಿ ನಿಧನವಾದ ಬಳಿಕ ಅವರ ಕಾರ್ಯ ಮಾಡಲು ಕುಟುಂಬದವರೆಲ್ಲ ಗೋಕರ್ಣಕ್ಕೆ ತೆರಳಿದ್ದೆವು. ಕಾರ್ಯ ಮುಗಿದ ಬಳಿಕ ಭದ್ರಾವತಿಗೆ ತೆರಳಲು ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದೆವು. ನಮ್ಮ ಭಾವ ಬುಕ್ ಅಂಗಡಿಗೆ



ಹೋಗಿ ಗೋಕರ್ಣ ಮಹಾತ್ಮಾ ಪುಸ್ತಕ ಹಾಗೂ ಕ್ಯಾಲೆಂಡರ್ ತೆಗೆದುಕೊಂಡು ಅಂಗಡಿಯವರೇ ಕೊಟ್ಟ ಚೀಲದಲ್ಲಿ ಹಾಕಿಕೊಂಡು ಬಂದು, ಅದನ್ನು ಅಕ್ಕನ ಕೈಗೆ ಕೊಟ್ಟರು. ಸ್ವಲ್ಪ ಸಮಯದ ಬಳಿಕ ನಾನು ಚೀಲದಲ್ಲಿ ಕೈಹಾಕಿ ಆ ಪುಸ್ತಕವನ್ನು ತೆಗೆದುಕೊಂಡು ಓದಲು ತೊಡಗಿದೆ. ಎದುರುಗಡೆಯಿಂದ ಒಬ್ಬ ವ್ಯಕ್ತಿ ತದೇಕ ಚಿತ್ತದಿಂದ ನನ್ನನ್ನು ನೋಡುತಿದ್ದ. ಇವನೇಕೆ ಹೀಗೆ ನೋಡುತ್ತಿದ್ದಾನೆ ಎಂದು ಸಿಟ್ಟಿನಿಂದ ಅವನನ್ನು ದುರುಗುಟ್ಟಿ ಹಾಗೇ ಪುಸ್ತಕವನ್ನು ಬ್ಯಾಗಿನಲ್ಲಿ ತುರುಕಲು ಹೋದೆ. ಅದರಲ್ಲಿ ಪಟ್ಟಿಪಟ್ಟಿ ನಿಕ್ಕರ್ ಕಂಡು, 'ಇದ್ಯಾರದೆ?' ಎಂದು ಅಕ್ಕನಿಗೆ ಕೇಳಿದೆ. 'ಆ ಬ್ಯಾಗು ನಮ್ಮದಲ್ಲ' ಅಂದಳು. ಕತ್ತೆತ್ತಿ ನೋಡಿದರೆ ದುರದುರ ನೋಡುತ್ತ ಎದುರಿಗೆ ಬಂದ ವ್ಯಕ್ತಿ ನನ್ನ ಕೈಯಲ್ಲಿದ್ದ ಬ್ಯಾಗನ್ನು ಕಿತ್ತುಕೊಂಡು ಬೇರೆ ಕಡೆ ಹೋದ. ಇಬ್ಬರದ್ದೂ ಅದೇ ಅಂಗಡಿಯಿಂದ ಬಂದ ಅದೇ ಬ್ಯಾಗಾದ್ದರಿಂದ ಹೀಗಾಯ್ತು.

**ಭಾರತೀ ಗಂಗಾಧರ್**